**Order Sheet**
**In the Court Of: II Addl. CIVIL JUDGE AND JMFC BELAGAVI**
**AT BELGAUM**
**F.R.No:O.S./1318/2012**
**Case Reg.No: O.S./1318/2012**

| Plaintiff | V E R S U S | Defendent |
|---|---|---|
| 1)Shri. Anand Laxman Sanadi | | 1)Shri. Annappa Laxman Sanadi &5 others<br><br>2)Shri. Siddappa Laxman Sanadi<br>3)Smt. Nagawwa Wo.Laxman Sanadi<br>4)Smt.Shanta Wo. Yallappa Shahapurkar<br>5)Smt. Lalita Wo. Mallappa Shahapurkar |

<u>ಅಸಲು ದಾವ ಸಂಖ್ಯೆ: **1318/2012**</u>

<u>ಡಬ್ಲೂ.**1**</u>

**ಸಾಕ್ಷಿಯನ್ನು ದಿಃ 30-05-2018 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ವಕೀಲರಿಂದ.**

ನನ್ನ ತಂದೆ ತೀರಿಕೊಂಡ ನಂತರ ನನ್ನ ತಂದೆಯ ಪೆನಶನ್ ನನ್ನ ತಾಯಿಗೆ ಬರುತ್ತಿದೆ ಎಂದರೆ ಸರಿ. ನಾನ ಖರೀದಿಸಿದ ಜಮೀನು ರೈತವಾರು ಆದ ನಂತರ ಖರೀದಿಸಿರುತ್ತೇನೆ. ಖರೀದ ಪತ್ರ ಆಗುವ ಪೂರ್ವದಲ್ಲಿ ಯವಾಗ ಖರೀದಿ ಕರಾರು ಪತ್ರ ಮಾಡಿಕೊಂಡಿದ್ದೆ ಎಂದು ನನಗೆ ನೆನಪಿಲ್ಲ. ನನಗೆ ಆ ಬಗ್ಗೆ ಅಂದಾಜು ಸಹ ಹೇಳಲು ಬರುವುದಿಲ್ಲ. ಆ ಸಂದರ್ಭದಲ್ಲಿ ನನ್ನ ಅಣ್ಣ ಮತ್ತು ನನ್ನ ತಾಯಿ ಹಿರಿತನ ಮಾಡುತಿದ್ದುದರಿಂದ ಸದರಿ ಕರಾರು ಪತ್ರ ಆದ ದಿನಾಂಕ ನನಗೆ ಹೇಳಲು ಬರುತ್ತಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಆ ಸಂದರ್ಭದಲ್ಲಿ ನಾನು ಬೇರೆಯಾಗಿದ್ದೇನು ಎಂದು ಹೇಳುತ್ತಾರೆ. ಖರೀದಿ ಕರಾರು ಪತ್ರ ನ್ಯಾಯಾಲಯದಲ್ಲಿ ಹಾಜರು ಮಾಡಲು ಯಾವುದೆ ತೊಂದರೆ ಇಲ್ಲ ಎಂದರೆ ಸಾಕ್ಷಿಯು ಅದು ಈಗ ನಮ್ಮ ಬಳಿ ಇರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಖರೀದಿಸಿದ ಜಮೀನು ಮೊದಲು ಅಣ್ಣಪ್ಪಗೌಡ ಇವರದು ಇರುತ್ತದೆ. ಖರೀದಿ ಕರಾರು ಪತ್ರ ಕಾಲಕ್ಕೆ ಉತಾರದಲ್ಲಿ ಯಾರ ಹೆಸರು ಇತ್ತು ಎಂದು ನನಗೆ ಗೊತ್ತಿಲ್ಲ.

ಖರೀದಿ ಕರಾರು ಪತ್ರ ಮಾಡುವಾಗ ಯಾರು ಯಾರು ಇದ್ದರು ಎಂದು ನನಗೆ ನೆನಪಿಲ್ಲ. ಸದರಿ ಖರೀದಿ ಕರಾರು ಪತ್ರಕ್ಕೆ ನನ್ನ ತಂಗಿಯ ಗಂಡ ಸಹಿ ಮಾಡಿರುತ್ತಾರೆ ಅದನ್ನು ಎಲ್ಲಿ ತಯಾರಿಸಿರುತ್ತಾರೆ ಎಂದು ನನಗೆ ನೆನಪಿಲ್ಲ. ನಿಪಿ-12 ರಲ್ಲಿ ಯಾರ ಯಾರ ಸಹಿ ಇರುತ್ತದೆ ಎಂದು ನನಗೆ ಹೇಳಲು ಬರುವುದಿಲ್ಲ. ದಿಃ 18-06-1988 ರಂದು ಖರೀದಿ ಕರಾರು ಪತ್ರ ನನ್ನ ತಾಯಿಯ ಹೆಸರಿನಲ್ಲಿ ಆಗಿತ್ತು ಎಂದರೆ ಸರಿ. ಸದರಿ ಖರೀದಿ ಕರಾರು ಪತ್ರದಲ್ಲಿ ರೈತಾವಾರು ಆದ ನಂತರ ಖರೀದಿ ಮಾಡಿಕೊಡುತ್ತೇನೆ ಎಂದು ಬರೆಯಲಾಗಿರುತ್ತದೆ ಎಂದರೆ ಸರಿ. ಸರ್ವೆ ನಂ. 140/10 ಬ, ಮತ್ತು ಸರ್ವೆ ನಂ. 140/10 ಡ, ತಲಾ 24 ಗುಂಟೆ ಇರುತ್ತದೆ ಎಂದು ಬರೆಯಲಾಗಿರುತ್ತದೆ ಎಂದರೆ ಸರಿ. ಖರೀದಿ ಕರಾರು ಪತ್ರದ ಪ್ರಕಾರ ಎಷ್ಟು ಮುಂಗಡ ಹಣ ನೀಡಿತ್ತು ಎಂದು ನನಗೆ ಹೇಳಲು ಬರುವುದಿಲ್ಲ. ನಾನು ಸದರಿ ಹಣವನ್ನು ನನ್ನ ಅಳಿಯ ಮತ್ತು ಮಾವನ ಕಡೆಯಿಂದ ಸದರಿ ಹಣವನ್ನು ಪಡೆದುಕೊಂಡು ಬಂದು ಕೊಟ್ಟಿರುತ್ತೇನೆ. ನನ್ನ ಮದುವೆಯಾಗಿ ಸುಮಾರು 25 ವರ್ಷಗಳಾಗಿದೆ. ನನ್ನ 18-19 ನೇ ವಯಸ್ಸಿನಲ್ಲಿ ನನ್ನ ಮದುವೆಯಾಗಿರುತ್ತದೆ. ನನ್ನ ಜನನ ದಿನಾಂಕ ಹೇಳಲು ಬರುವುದಿಲ್ಲ. ನನ್ನ ಮೊದಲನೆ ಮಗ ನನ್ನ ಮದುವಯಾಗಿ 3-4 ವರ್ಷಕ್ಕೆ ಜನಿಸಿರುತ್ತಾನೆ. ನನ್ನ ಮಗನ ಶಾಲಾ ದಾಖಲೆ ಹಾಜರು ಪಡಿಸಲು ತೊಂದರೆ ಇರಲಿಲ್ಲ. ನನ್ನ ಮಗ ಎಸ ಎಸ ಎಲ್ ಸಿ ಮುಗಿಸಿ 4-5 ವರ್ಷಗಳಾಗಿದೆ. ನನ್ನ ಮಗನಿಗೆ ಈಗ 20 ವರ್ಷಗಳು ಇರುತ್ತದೆ. 1988 ರಲ್ಲಿ ಖರೀದಿ ಕರಾರು ಪತ್ರ ಆಗುವ ಸಂದರ್ಭದಲ್ಲಿ ನನಗೆ 12 ವರ್ಷ ವಯಸ್ಸು ಇತ್ತು ಎಂದರೆ ಸರಿ. ಕರಾರು ಪತ್ರ ಮಾಡುವ ಸಂದರ್ಭದಲ್ಲಿ ನಾನೇ ಹಣವನ್ನು ನೀಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಖರೀದಿ ಕರಾರು ಪತ್ರ ಆಗುವ ಸಂದರ್ಭದಲ್ಲಿ ನನ್ನ ಹಿರಿಯ ಸಹೋದರ ಕೆಲಸಕ್ಕೆ ಹೋಗುತ್ತಿದ್ದ ಎಂದರೆ ಸರಿ. ಖರೀದಿ ಕರಾರು ಪತ್ರ ಕಾಲಕ್ಕೆ ನನ್ನ ತಾಯಿಗೆ ಪೆನಶನ್ ಬರುತ್ತಿತ್ತು ನನ್ನ ಹಿರಿಯ ಸಹೋದರ ಕೆಲಸಕ್ಕೆ ಹೋಗುತ್ತಿದ್ದ ಅದರಿಂದ ಬಂದ ಹಣದಿಂದ ಸದರಿ ಜಮೀನನ್ನು ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಖರೀದಿ ಕರಾರು ಪತ್ರವನ್ನು ನನ್ನ ತಾಯಿ ಮತ್ತು ಸಹೋದರ ಮಾಡಿಕೊಂಡಿದ್ದರಿಂದ ನನಗೆ ಅದರ ಬಗ್ಗೆ ಸಂಪೂರ್ಣ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ಖರೀದಿ ಕರಾರು ಪತ್ರ ಕಾಲಕ್ಕೆ ಗೌಡಪ್ಪ ಅಪ್ಪಣ್ಣ ಪಾಟೀಲ ಇವರು ಮಾಲೀಕರಿದ್ದರು ಎಂದರೆ ಸಾಕ್ಷಿಯು ಅಣ್ಣಪ್ಪಗೌಡ ಎಂದು ನನಗೆ ನೆನಪಿರುತ್ತದೆ ಎಂದು ನುಡಿಯುತ್ತಾರೆ. ನನಗೆ ಯಾರು ಖರೀದಿ ಕೊಟ್ಟಿರುತ್ತಾರೆ ಎಂದು ಹೇಳಲು ಬರುವುದಿಲ್ಲ. ಖರೀದಿ ಸಮಯದಲ್ಲಿ ಹಣ ಪಡೆದುಕೊಂಡವರ ಸಾಕ್ಷಿ ಮಾಡಿಸಲು ತೊಂದರೆ ಇದೆಯಾ ಎಂದರೆ ಸಾಕ್ಷಿಯು ಸದರಿ ಅವರು ಈಗ ನನ್ನ ಪರ ಸಾಕ್ಷಿ ನುಡಿಯುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಸಾಕ್ಷಿದಾರನು ಈಗ ನನ್ನ

ತಾಯಿ ಮತ್ತು ಸಹೋದರರ ಹಣ ನೀಡಿರುತ್ತಾರೆ ಎಂದು ಹೇಳುತ್ತಾನೆ. ನನಗೆ ನನ್ನ ಮಾವ ನನ್ನ ಅಳಿಯ ಹಣ ನೀಡಿದ್ದರು ಎಂಬ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ. ಗೌಡ್ರಪ್ಪ ಇವರು ನನಗೆ ಸಂಬಧಿಕರು ಇರುವುದಿಲ್ಲ. ಖರೀದಿ ಕರಾರು ಪತ್ರ ಕಾಲಕ್ಕೆ ಯಾರು ಹಿರಿಯರು ಇದ್ದರು ಎಂದು ನನಗೆ ಹೇಳಲು ಬರುವುದಿಲ್ಲ. ನನ್ನ ಸಮಕ್ಷಮ ಯಾವುದೇ ಕರಾರು ಪತ್ರ ಆಗದೇ ಇದ್ದುದರಿಂದ ನನಗೆ ಹೇಳಲು ಬರುತ್ತಿಲ್ಲ ಎಂದರೆ ಸರಿಯಲ್ಲ. ಕರಾರು ಪತ್ರ ಆಗುವ ಸಂದರ್ಭದಲ್ಲಿ ನಮ್ಮ ಮಾವನಾದ ಲಕ್ಷ್ಮಣ ಶಾಹಾಪೂರ್ಕರ ಹಾಜರಿದ್ದರು. ಸದರಿ ಯವರು ಹಾಜರಿದ್ದರು ಎಂಬ ಬಗ್ಗೆ ಕರಾರು ಪತ್ರದ ಮೇಲಾಗಲಿ ಖರೀದಿ ಪತ್ರದ ಮೇಲಾಗಲಿ ಸಹಿ ಮಾಡಿಲ್ಲ ಎಂದರೆ ಸರಿ.

ಖರೀದಿ ಪತ್ರ ಕಾಲಕ್ಕೆ ನನ್ನ ಇಬ್ಬರು ಸಹೋದರರು ನೌಕರಿ ಮಾಡುತ್ತಿದ್ದರು ಎಂದರೆ ಸರಿ. ಅವರಿಬ್ಬರು ನೌಕರಿ ಮಾಡುತ್ತಿದ್ದುದರಿಂದ ನಾನು ಊರಿನಲ್ಲಿ ಜಮೀನು ಕೆಲಸ ಮಾಡಿಕೊಂಡಿದ್ದೆ ಎಂದರೆ ಸರಿ. ಸದರಿ ಯವರು ನೌಕರಿ ಮಾಡುತ್ತಿದುದ್ದರಿಂದ ನನ್ನ ಹೆಸರಿನಲ್ಲಿ ಸದರಿ ಜಮೀನನ್ನು ಖರೀದಿಸಿದ್ದರು ಎಂದರೆ ಸರಿಯಲ್ಲ. ಖರೀದಿಯಾದ ನಂತರ ನಾವೆಲ್ಲರು ಸಾಮೂಹೀಕವಾಗಿ ಜಮೀನನ್ನು ಮಾಡುತ್ತಿದ್ದೇವು ಎಂದರೆ ಸರಿಯಲ್ಲ. 5 ನೇ ಪ್ರತಿವಾದಿಯ ಗಂಡ 5-6 ವರ್ಷಗಳ ಕಾಲ ಜಮೀನನ್ನು ಮಾಡಿರುತ್ತಾನೆ. ಸದರಿ ಜಮೀನಿನ ಉತ್ಪನ್ನವನ್ನು 5 ನೇ ಪ್ರತಿವಾದಿಯ ಗಂಡ ನಮಗೆ ನೀಡಿರುವುದಿಲ್ಲ. ಸದರಿ ಜಮೀನು ಖರೀದಿಸಿದ ನಂತರ ನಾನೇ ಕಬ್ಜಾದಲ್ಲಿ ಇರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಒಕ್ಕಲುತನ ಹೊರತು ಪಡಿಸಿ ಬೇರೆ ಕೆಲಸ ಮಾಡುವುದಿಲ್ಲ ಎಂದರೆ ಸರಿ. ಒಕ್ಕಲುತನದಿಂದ ಬಂದ ಹಣವನ್ನು ಯಾವುದೇ ಬ್ಯಾಂಕಿನಲ್ಲಿ ಇಟ್ಟಿರುವುದಿಲ್ಲ. 3-4 ಲಕ್ಷ ಬ್ಯಾಂಕಿನಲ್ಲಿ ಸಾಲ ಮಾಡಿರುತ್ತೇನೆ. ನಾನು ಯಾವುದೇ ಆದಾಯ ಹೊಂದಿಲ್ಲ ಎಂದರೆ ಸರಿಯಲ್ಲ. ನನ್ನ ಸಹೋದರರಿಗೆ ಯಾವುದೇ ಜಮೀನು ಕೊಡಬಾರದು ಎಂದು ಒಟ್ಟಿಗೆ ಖರೀದಿಸಿದ್ದರು ಸಹ ನಾನ್ನೊಬ್ಬನೇ ಖರೀದಿಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಇದುವರೆಗೂ ಸಹ ಕಾನೂನು ಪ್ರಕಾರ ವಾಟಣಿ ಮಾಡಿಕೊಂಡಿರುವುದಿಲ್ಲ.

**ಪಾಟೀ ಸವಾಲು ಪ್ರತಿವಾದಿ 5 ನೇದವರ ಪರ ಬಿ.ಎನ್ ಪಿ ವಕೀಲರಿಂದ.**

ನನ್ನ ಸಹೋದರಿಯರಿಗೆ ಯಾವುದೇ ಹಿಸ್ಸೆ ನೀಡಿಲ್ಲ ಎಂದರೆ ಸರಿ. 5 ನೇ ಪ್ರತಿವಾದಿಯರ ಗಂಡ ಸುಮಾರು 10 ವರ್ಷಗಳ ವರೆಗೆ ಜಮೀನು ಮಾಡಿದ್ದ ಎಂದರೆ ಸರಿ. ಸದರಿ ಜಮೀನು ಮಾಡುವ ಕಾಲಕ್ಕೆ ನಮಗೆ ಅರ್ಧ ಹಾಗೂ ಆತನಿಗೆ ಅರ್ಧ ಎಂದು ಮೌಕಿಕ ಕರಾರು ಆಗಿತ್ತು ಎಂದರೆ ಸರಿಯಲ್ಲ. ನನ್ನ ತಂಗಿಗೆ ಸಂಪೂರ್ಣ ಆದಾಯ ಬಿಟ್ಟು ಕೊಟ್ಟಿದ್ದೇವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 5 ನೇ

ಪ್ರತಿವಾದಿಯ ಮದುವೆ 1990 ರಂದು ಆಗಿರುತ್ತದೆ ಎಂದರೆ ಸರಿ. 5 ನೇ ಪ್ರತಿವಾದಿಗೆ ಅವರಿಗೆ ಕೊಡಬೇಕಾದ ಹಿಸ್ಸೆಯ ಹಣವನ್ನು ನೀಡಿರುತ್ತೇವೆ. ಆ ಬಗ್ಗೆ ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸರಿ. 5 ನೇ ಪ್ರತಿವಾದಿಗೆ ಹಿಸ್ಸೆಯ ಹಣ ನೀಡಿರುತ್ತೇವೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 5 ನೇ ಪ್ರತಿವಾದಿಗೆ ಸಹ ದಾವ ಸ್ವತ್ತಿನಲ್ಲಿ ಹಿಸ್ಸೆ ಇರುತ್ತದೆ ಎಂದರೆ ಸರಿಯಲ್ಲ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಮೇರೆಗೆ ಗಣಕೀಕೃತದಿಂದ ಬೆರಳಚ್ಚು ಮಾಡಲಾಯಿತು)**

**Sd/-**

**2 ನೇ ಹೆಚ್ಚುವರಿ ನ್ಯಾಯಾಧೀಶರು ಮತ್ತು ಜೆ.ಎಮ್. ಎಫ್. ಸಿ**
**ನ್ಯಾಯಾಲಯ ಬೆಳಗಾವಿ.**

ಓ.ಕೆ.ಒ. ಸ.ಮಾ.